ಶ್ರೀ ಎಂ. ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ರಾಜ್ಯದಲ್ಲಿ 23 ರೋಗಗ್ರಸ್ಥ ಜವಳಿ ಗಿರಣಿಗಳಿವೆ.

ಆ) ರೋಗಗ್ರಸ್ಥವಾಗಲು ಈ ಕೆಳಗಿನ ಕಾರಣಗಳು ಪ್ರಮುಖವಾದವುಗಳೆಂದು ಗುರುತಿಸಲಾಗಿದೆ.

1. ಹಳೆ ಯಂತ್ರೋಪಕರಣಗಳಿಂದಾಗಿ ಕಡಿಮೆ ಕದಿರಿನ ಸಾಮರ್ಥ್ಯ ಬಳಕೆ.
2. ನುರಿತ ಕೆಲಸಗಾರರ ಅಭಾವ
3. ಮಾರಕವಿಲ್ಲದ ಮಾರುಕಟ್ಟೆ ಪರಿಸ್ಥಿತಿ
4. ದುಡಿಮೆ ಬಂಡವಾಳದ ಕೊರತೆ
5. ಹತ್ತಿ ಮತ್ತು ನೂಲಿನ ಮಧ್ಯೆ ಹೊಂದಾಣಿಕೆಯಿಲ್ಲದ ಬೆಲೆಗಳು
6. ನಶಿಸಿ ಹೋಗಿರುವ ಬಂಡವಾಳ
7. ದುಬಾರಿ ವಿದ್ಯುತ್‌ದರ
8. ನಿರಂತರವಿಲ್ಲದ ವಿದ್ಯುತ್ ಪೂರೈಕೆ ಹಾಗೂ
9. ಅಸಮರ್ಥ ವೃತ್ತಿ ಪರ ಆಡಳಿತ.

ಇ) ಖಾಸಗಿ ವಲಯದಲ್ಲಿರುವ ರೋಗಗ್ರಸ್ಥ ಜವಳಿ ಉದ್ಯಮಗಳಿಗೆ ಪುನಶ್ಚೇತನ ನೀಡುವ ಬಗ್ಗೆ ಬಿಐಎಫ್‌ಆರ್ (ಬೋರ್ಡ್ ಫಾರ್ ಇಂಡಸ್ಟ್ರೀಯಲ್ ಫೈನಾನ್ಸ್ ಅಂಡ್ ರೀಕನಸ್ಟ್ರಕ್ಷನ್) ಕ್ರಮ ಕೈಗೊಳ್ಳುತ್ತದೆ. ಇದು ರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿದ್ದು, ಕೇಂದ್ರ ಸರ್ಕಾರದ ಆಡಳಿತ ವ್ಯಾಪ್ತಿಯಲ್ಲಿ ಬರುತ್ತದೆ. ಸಹಕಾರಿ ವಲಯದ ರೋಗಗ್ರಸ್ಥ ಜವಳಿ ಉದ್ಯಮಗಳಿಗೆ ಪುನಶ್ಚೇತನದ ಕಾರ್ಯಕ್ರಮವನ್ನು ರಾಜ್ಯ ಸರ್ಕಾರವು ರೂಪಿಸಬೇಕಾಗಿದ್ದು, ಪುನಶ್ಚೇತನದ ಸಾಧ್ಯಾ ಸಾಧ್ಯತೆಗಳ ಬಗ್ಗೆ ಸಮಗ್ರವಾದ ಅಧ್ಯಯನವೊಂದನ್ನು ಮಾಡಿ ಅಧ್ಯಯನ ವರದಿಯ ಆಧಾರದ ಮೇಲೆ ಪುನಶ್ಚೇತನ ಕಾರ್ಯಕ್ರಮಗಳನ್ನು ರೂಪಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಅಲ್ಪ ಸಂಖ್ಯಾತರ ಸ್ವಯಂ ಸೇವಾ ಸಂಸ್ಥೆಗಳಿಗೆ ಧನಸಹಾಯ

382 - ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಲ್ಪಸಂಖ್ಯಾತರ ಎಷ್ಟು ಸ್ವಯಂ ಸೇವಾ ಸಂಸ್ಥೆಗಳಿಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಧನಸಹಾಯವನ್ನು ನೀಡುತ್ತಿವೆ.

ಆ) ಆ ಧನಸಹಾಯದಿಂದ ಸದರಿ ಸೇವಾ ಸಂಸ್ಥೆಗಳು ಯಾವ ಕೆಲಸಗಳನ್ನು ಮಾಡುತ್ತಿವೆ? (ಕಳೆದ ಮೂರು ವರ್ಷಗಳ ವಿವರ ನೀಡುವುದು)

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಅಲ್ಪಸಂಖ್ಯಾತರ ಇಲಾಖೆಯಿಂದ ವಸತಿ ನಿಲಯಗಳು ನಡೆಸುತ್ತಿರುವ 40 ಸ್ವಯಂಸೇವಾ ಸಂಸ್ಥೆಗಳಿಗೆ ರಾಜ್ಯ ಸರ್ಕಾರವು ಧನಸಹಾಯ (ಅನುದಾನ) ನೀಡುತ್ತಿದೆ.

ಆ) 1. ಈ ಧನಸಹಾಯದಿಂದ ಸದರಿ ಸೇವಾಸಂಸ್ಥೆಗಳು ವಸತಿನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆಯನ್ನು ಮಾಡುತ್ತಿದೆ.

2. ಕೆಲವು ಅಲ್ಪಸಂಖ್ಯಾತ ಸೇವಾ ಸಂಸ್ಥೆಗಳು ಸರ್ಕಾರದ ಅನುದಾನದಿಂದ ವಸತಿನಿಲಯ ಕಟ್ಟಡಗಳನ್ನು ನಿರ್ಮಿಸುತ್ತಿವೆ.

3. ಕಳೆದ ಮೂರು ವರ್ಷಗಳ ವಿವರಗಳು ಈ ಕೆಳಕಂಡಂತಿದೆ.

	ವರ್ಷ	ಸ್ವಯಂಸೇವಾ ಸಂಸ್ಥೆಗಳ ಸಂಖ್ಯೆ	ವಸತಿ ನಿಲಯದಲ್ಲಿ ಸೌಕರ್ಯ ಪಡೆದ ವಿದ್ಯಾರ್ಥಿಗಳ ಸಂಖ್ಯೆ	ಕಟ್ಟಡ ನಿರ್ಮಾಣಕ್ಕೆ ಅನುದಾನ ಪಡೆದ ಸಂಸ್ಥೆಗಳ ಸಂಖ್ಯೆ
1.	1996-97	34	1012	2
2.	1997-98	35	1167	5
3.	1998-99	40	2044	5

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ವಿದ್ಯಾರ್ಥಿನಿಲಯ

383 - ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್(ಹುಬ್ಬಳ್ಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ವಿದ್ಯಾರ್ಥಿನಿಲಯಗಳೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಈ ವಿದ್ಯಾರ್ಥಿ ನಿಲಯಗಳಿಗೆ ಪ್ರತಿ ವರ್ಷ ಬಿಡುಗಡೆ ಮಾಡುತ್ತಿರುವ ಅನುದಾನವೆಷ್ಟು?

ಇ) ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಿದ ಒಟ್ಟು ಹಣವೆಷ್ಟು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) 1631 ಪರಿಶಿಷ್ಟ ಜಾತಿ ವಿದ್ಯಾರ್ಥಿನಿಲಯಗಳು. 61 ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯಗಳು. (ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ.

ಆ) ರೂ. 5835.23 ಲಕ್ಷಗಳು ಪರಿಶಿಷ್ಟ ಜಾತಿ ವಿದ್ಯಾರ್ಥಿನಿಲಯಗಳಿಗಾಗಿ ಬಿಡುಗಡೆ ಮಾಡಲಾಗುತ್ತದೆ.